## ನಕ್ಕುಬಿಡಿ..!



# ಅಪಾಯಕಾರಿ ಭಾರತೀಯ ನರಕ

**ಗುಂಡ** ಸತ್ತಾಗ ನರಕಕ್ಕೆ ಹೋದ. ಅಲ್ಲಿ ಪ್ರತಿಯೊಂದು ದೇಶಕ್ಕೂ ಪ್ರತ್ಯೇಕವಾಗಿರುವ ನರಕಗಳು ಇದ್ದವು.

ಗುಂಡನಿಗೆ ಎಲ್ಲವನ್ನೂ ನೋಡಬೇಕೆನ್ನಿಸಿತು. ಮೊದಲು ಜರ್ಮನ್ ನರಕಕ್ಕೆ ಹೋಗಿ 'ಇಲ್ಲಿ ಏನು ಮಾಡುತ್ತಾರೆ?' ಎಂದು ಕೇಳಿದ.

'ಮೊದಲು ನಿನ್ನನ್ನು ಎಲೆಕ್ಟ್ರಿಕ್ ಕುರ್ಚಿಯ ಮೇಲೆ ಒಂದು ಗಂಟೆ ಕೂರಿಸುತ್ತಾರೆ. ಅನಂತರ ಮೊಳೆಗಳಿರುವ ಮುಳ್ಳಿನ ಹಾಸಿಗೆಯ ಮೇಲೆ ಒಂದು ತಾಸು ಮಲಗಿಸುತ್ತಾರೆ. ಆಮೇಲೆ ಜರ್ಮನ್ ಪಿಶಾಚಿಯೊಂದು ಇಡೀ ದಿನ ಚಾಟಿ ಏಟು ನೀಡುತ್ತದೆ' ಎಂದು ಅಲ್ಲಿದ್ದ ಒಬ್ಬಾತ ವಿವರ ನೀಡಿದ.

ಗುಂಡನಿಗೆ ಭಯವಾಯಿತು. ಆತ ಅಲ್ಲಿಂದ ಮುಂದೆ ಸಾಗಿ, ಅಮೆರಿಕ, ಇಂಗ್ಲೆಂಡ್, ಸೌದಿ ಅರೇಬಿಯಾ ಮೊದಲಾದ ಹಲವು ದೇಶಗಳ ನರಕಗಳನ್ನು ಪರೀಕ್ಷಿಸಿದ. ಅವೆಲ್ಲವೂ ಹೆಚ್ಚು ಕಡಿಮೆ ಜರ್ಮನ್ ನರಕದ ರೀತಿಯಲ್ಲೇ ಇದ್ದವು.

ಕೊನೆಗೆ ಗುಂಡ ಭಾರತದ ನರಕಕ್ಕೆ ಬಂದ. ಅಲ್ಲಿ ನೋಡಿದರೆ ಜನವೋ ಜನ! ಭಾರತದ ನರಕದ ಒಳಗೆ ಹೋಗಲು ಅತಿ ಉದ್ದನೆಯ ಕ್ಯೂ ಇತ್ತು. ವಿದೇಶೀಯರೂ ಅಲ್ಲಿ ಸಾಕಷ್ಟು ಉತ್ಸಾಹದಿಂದ ನಿಂತಿದ್ದರು. ಗುಂಡನಿಗೆ ಆಶ್ಚರ್ಯವಾಯಿತು. 'ಇಲ್ಲಿ ಯಾವ ರೀತಿಯ ಶಿಕ್ಷೆ ಕೊಡುತ್ತಾರೆ?' ಎಂದು ವಿಚಾರಿಸಿದ.

ಅಲ್ಲಿದ್ದಾತ ಹೇಳಿದ– 'ಮೊದಲು ನಿನ್ನನ್ನು ಎಲೆಕ್ಟ್ರಿಕ್ ಕುರ್ಚಿಯ ಮೇಲೆ ಒಂದು ಗಂಟೆ ಕೂರಿಸುತ್ತಾರೆ, ಅನಂತರ ಮೊಳೆಗಳಿರುವ ಮುಳ್ಳಿನ ಹಾಸಿಗೆ ಮೇಲೆ ಒಂದು ತಾಸು ಮಲಗಿಸುತ್ತಾರೆ. ಆಮೇಲೆ ಭಾರತೀಯ ಪಿಶಾಚಿಯೊಂದು ಇಡೀ ದಿನ ಚಾಟಿ ಏಟು ನೀಡುತ್ತದೆ.'

'ಉಳಿದ ದೇಶಗಳ ನರಕದ ಶಿಕ್ಷೆಯಂತೆಯೇ ಇದೆಯಲ್ಲ! ಆದರೂ ಯಾಕೆ ಇಷ್ಟೊಂದು ಜನ ಒಳ ಹೋಗಲು ಮುಗಿಬಿದ್ದಿದ್ದಾರೆ?' ಎಂದು ಗುಂಡ ಪ್ರಶ್ನಿಸಿದ.

ಅಲ್ಲಿದ್ದಾತ ನಿರ್ಲಿಪ್ತನಾಗಿ ಉತ್ತರಿಸಿದ– 'ಇಲ್ಲಿನ ನಿರ್ವಹಣೆಯ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ. ಇಲ್ಲಿನ ಎಲೆಕ್ಟ್ರಿಕ್ ಕುರ್ಚಿ ಕೆಲಸ ಮಾಡುತ್ತಿಲ್ಲ. ಯಾಕೆಂದರೆ ದಿನದ ಬಹುಪಾಲು ಕರೆಂಟ್ ಇಲ್ಲ. ಮುಳ್ಳಿನ ಹಾಸಿಗೆಯ ಮೊಳೆಗಳನ್ನು ಯಾರೋ ಕದ್ದೊಯ್ದಿದ್ದಾರೆ. ಹಾಗೆಯೇ ಇಲ್ಲಿ ನೇಮಿಸಲ್ಪಟ್ಟ ಪಿಶಾಚಿ ಮೊದಲು ಸರ್ಕಾರಿ ನೌಕರಿಯಲ್ಲಿ ಇದ್ದವ. ಆತ ಕೆಲಸಕ್ಕೆ ಬರುತ್ತಾನೆ. ರಿಜಿಸ್ಟರ್‌ನಲ್ಲಿ ಸೈನ್ ಮಾಡಿ ನಂತರ ಕ್ಯಾಂಟೀನ್‌ನತ್ತ ಹೋದರೆ ಸಂಜೆವರೆಗೂ ಬರುವುದೇ ಇಲ್ಲ' ಎಂದ!

–ವಿದ್ಯಾ ಹಾಲಭಾವಿ



ಬಿಳಿ ಮಚ್ಚೆಗಳಿ
ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.

ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯಜಿಯನ್ನು ಸಂಪರ್ಕಿಸಿ.


ಲೈಂಗಿಕ ಸಮಸ್ಯೆ
ಖಂಡಿತ ಗುಣವಾಗುವುದು

ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ

ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ


ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ ಸಂಪರ್ಕಿಸಿರಿ.

Asia Ayurved P.O. Katri Sarai (Gaya)

Phone: 0631-2224881
09931840701 / 09334221088
09431025482 / 09835671211